## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅ.ದೇವೇಗೌಡ ರವರು ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ

ವಿಷಯ: ರಾಜ್ಯದಲ್ಲಿ ಗಾಂಜಾ ಮತ್ತು ಡ್ರಗ್ಸ್ ಕಳ್ಳಸಾಗಣಿಕೆಯು ಮಾರಕ ರೋಗದಂತೆ ಹರಡುತ್ತಿದೆ. ಯುವ ವಿದ್ಯಾರ್ಥಿಗಳು ಓದು-ಬರಹ, ಕಲೆ, ಸಾಹಿತ್ಯ, ಉದ್ಯಮಗಳಂತಹ ವಿಭಾಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಜೀವನವನ್ನು ಹಸನಾಗಿಸಿಕೊಳ್ಳಬೇಕಾದ ವಿದ್ಯಾರ್ಥಿಗಳು ಮತ್ತು ಯುವ ಸಮೂಹ ಗಾಂಜಾ ಮತ್ತು ಡ್ರಗ್ಸ್ ವ್ಯಸನಿಗಳಾಗುತ್ತಿದ್ದು, ಇದರಿಂದಾಗಿ ವಿದ್ಯಾರ್ಥಿಗಳ ಮತ್ತು ಯುವ ಜನತೆಯ ಜೀವನಕ್ಕೆ ಮಾರಕವಾಗಿ ಪರಿಣಮಿಸುತ್ತಿರುವುದು ಅತ್ಯಂತ ವಿಷಾದನೀಯ ವಿಷಯ.

ಅದರಲ್ಲೂ ರಾಜ್ಯದ ಮಹಾನಗರ ಹಾಗೂ ಸುಪ್ರಸಿದ್ಧ ಬೆಂಗಳೂರು ನಗರದಲ್ಲಿ ಗಣನೀಯವಾಗಿ ಈ ಹಾವಳಿಯು ಹೆಚ್ಚುತ್ತಿದ್ದು, ಇದು ಕಾನೂನು ಬಾಹೀರವಾಗಿದ್ದು, ನಗರದಲ್ಲಿ ಬಹು ರಾಷ್ಟ್ರೀಯ ಸಂಸ್ಥೆಗಳು ಹೆಚ್ಚಾಗಿದ್ದು ಈ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕೆಲವು ಉದ್ಯೋಗಿಗಳು ಸಹಾ ಡ್ರಗ್ಸ್ ವ್ಯಸನಿಗೆ ತುತ್ತಾಗಿ, ಕಳ್ಳತನ, ದರೋಡೆ ಹಾಗೂ ಇತರೆ ದುಶ್ಚಟಕ್ಕೆ ಬಲಿಯಾಗಿ, ಇದರಿಂದಾಗಿ ಅನೇಕ ವ್ಯಸನಿಗಳು ಮನೆಗಳು ಹಾಳಾಗಿವೆ. ನಮ್ಮ ರಾಜ್ಯ ಹಾಗೂ ದೇಶದ ಪ್ರಶ್ನೆಯಾಗಿದೆ.

ರಾಜ್ಯದ ಪ್ರತಿಷ್ಠೆಯಾಗಿದ್ದು, ಡ್ರಗ್ಸ್ ಕಳ್ಳಸಾಗಣಿಕೆ ರಾಜ್ಯಕ್ಕೆ ಪ್ರವೇಶಿಸದಂತೆ ಕಾನೂನು ರೂಪಿಸಿ, ಗಂಭೀರವಾಗಿ ಚಿಂತಿಸಿ ರಾಜ್ಯದ ವಿದ್ಯಾರ್ಥಿಗಳು, ಯುವ ಸಮೂಹವನ್ನು ಈ ದಂದೆಯಿಂದ ದೂರ ಮಾಡುವ ಬಗ್ಗೆ ಸನ್ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ.

ಉತ್ತರ:

ರಾಜ್ಯದ ಹಾಗೂ ರಾಜ್ಯದಲ್ಲಿನ ನಗರ ಪ್ರದೇಶಗಳು, ಬೆಂಗಳೂರು ನಗರ ಸೇರಿದಂತೆ ಡ್ರಗ್ಸ್ ದಂಧೆಕೋರರ ಹಾಗೂ ಮಾದಕ ವ್ಯಸನಿಗಳ ವಿರುದ್ಧ ಶೂನ್ಯ ಸಹನೆ ಹೊಂದಿದ್ದು, ಡ್ರಗ್ಸ್ ಜಾಲವನ್ನು ಸಂಪೂರ್ಣವಾಗಿ ತಡೆಗಟ್ಟುವ ನಿಟ್ಟಿನಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮತ್ತು ಸೇವನೆ ಮಾಡುವವರ ಕುರಿತು ಮಾಹಿತಿ ಸಂಗ್ರಹಿಸಿ, ದಾಳಿ ನಡೆಸಿ ಸದರಿಯವರುಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿನ ಎಲ್ಲಾ ಜಿಲ್ಲೆ/ನಗರ ಪ್ರದೇಶಗಳಲ್ಲಿ ಎನ್.ಡಿ.ಪಿ.ಎಸ್.ಕಾಯ್ದೆ, 1985ರ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಮತ್ತು ಡಗ್ಸ್ ದಂದೆಯಲ್ಲಿ ಭಾಗಿಯಾಗಿರುವವರಲ್ಲಿ ಬಂಧಿಸಿರುವ ಆರೋಪಿಗಳ ಸಂಖ್ಯೆ ಈ ಕೆಳಕಂಡಂತಿದೆ:

| ವರ್ಷ | ಎನ್.ಡಿ.ಪಿ.ಎಸ್ ಕಾಯ್ದೆ ಅಡಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ | ಬಂಧಿಸಿರುವ ಆರೋಪಿಗಳ ಸಂಖ್ಯೆ |
|---|---|---|
| 2021 | 5787 | 6434 |
| 2022 | 6398 | 6065 |
| 2023 (ಜೂನ್ 15ರ ವರೆಗೆ) | 3181 | 2431 |

ಮಾರಕಾಸ್ತ್ರ ಹಿಡಿದು ಹೊಡೆಯಲಾರಂಬಿಸಿದ್ದು, ಅನಿಲ್ ಗಾಜಿನ ಬಾಟಲ್‌ನಿಂದ ಮುಖ ಮತ್ತು ತಲೆಗೆ ಹೊಡೆದಿದ್ದು, ಶಂಕರ್ ಚಾಕುವಿನಿಂದ ಹೊಟ್ಟೆಗೆ ಚುಚ್ಚಿರುತ್ತಾನೆ. ಹ್ಯಾರಿಸ್ ಮತ್ತು ಮಂಜು ಗಾಜಿನ ಬಾಟಲಿನ ಚೂರುಗಳಿಂದ ಹೊಡೆದು ನಾವು ಜಗಳ ಬಿಡಿಸಲು ಪ್ರಯತ್ನಿಸಿದ್ದು ರಕ್ತಸ್ರಾವದಿಂದ ಬಿದ್ದಿದ್ದ ವೇಣುಗೋಪಾಲನನ್ನು ಉಪಚರಿಸಿ ಟಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ವೈದ್ಯರು ಪರಿಶೀಲಿಸಿ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ" ಎಂಬುದಾಗಿ ನೀಡಿದ ದೂರಿನ ಮೇರೆಗೆ ಟಿ.ನರಸೀಪುರ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ: 173/2023 ಕಲಂ 143, 147, 148, 504, 307, 302 ರೆ/ವಿ 149 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿರುತ್ತದೆ. ನಂತರ ಪೊಲೀಸ್ ಅಧೀಕ್ಷಕರು ಮೈಸೂರು ಜಿಲ್ಲೆ ಮತ್ತು ಪೊಲೀಸ್ ಉಪಮಹಾನಿರೀಕ್ಷಕರು, ದಕ್ಷಿಣ ವಲಯ ಮೈಸೂರು ರವರು ಕೂಡಲೇ ಸ್ಥಳಕ್ಕೆ ಭೇಟಿ ನೀಡಿರುತ್ತಾರೆ.

ದಿನಾಂಕ:10.07.2023 ರಂದು ಮೈಸೂರಿನ ಸರ್ಕಾರಿ ಮೆಡಿಕಲ್ ಶವಗಾರದಲ್ಲಿ ಮೃತ ವೇಣುಗೋಪಾಲ್ ರವರ ವೈದ್ಯಕೀಯ ಮರಣೋತ್ತರ ಶವಪರೀಕ್ಷೆ ನಡೆದಿದ್ದು, ನಂತರ ಮೃತ ದೇಹವನ್ನು ಅಂತ್ಯಸಂಸ್ಕಾರಕ್ಕಾಗಿ ಟಿ.ನರಸೀಪುರಕ್ಕೆ ತೆಗೆದುಕೊಂಡು ಹೋಗಿದ್ದು, ಅಂತ್ಯಸಂಸ್ಕಾರವು ಶಾಂತಿಯುತವಾಗಿ ಮುಗಿದಿರುತ್ತದೆ. ಈ ಸಮಯದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಈ ಪ್ರಕರಣದಲ್ಲಿ ಈಗಾಗಲೇ ಈ ಕೆಳಕಂಡ 06 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. (1) ಮಣಿಕಂಠಸ್ವಾಮಿ @ ಮಣಿ @ ಕೂಳೆ ಮಣಿ ಬಿನ್ ಸಿದ್ದಪ್ಪ, (2) ಸಂದೇಶ ಕುಮಾರ್ ಬಿನ್ ಸ್ವಾಮಿನಾಥನ್, (3) ಅನಿಲ್ ಬಿನ್ ಲೇಟ್.ಮಹದೇವ, (4) ಶಂಕರ @ ಶಂಕರೇಗೌಡ @ ತುಪ್ಪ ಬಿನ್ ಮಹದೇವಪ್ಪ, (5) ಮಂಜು @ ಮಂಜುನಾಥ್ ಬಿನ್ ಪುಟ್ಟಸ್ವಾಮಿ, (6) ಹ್ಯಾರಿಸ್ @ ಮಹಮದ್ ಹ್ಯಾರಿಸ್ ಬಿನ್ ಸರ್ತಾಜ್ ಪಾಷ ರವರುಗಳನ್ನು ದಸ್ತಗಿರಿ ಮಾಡಿ ವಿಚಾರಣೆ ಮಾಡಲಾಗಿದ್ದು, ಮುಂದಿನ ತನಿಖೆ ಕೈಗೊಳ್ಳಲಾಗಿರುತ್ತದೆ.

ಈ ಘಟನೆಯು ವೈಯಕ್ತಿಕ ವಿಚಾರಗಳಿಗಾಗಿ ನಡೆದಿದ್ದು, ಮೃತ ವೇಣುಗೋಪಾಲ ಮತ್ತು ಆರೋಪಿಗಳು ಪರಿಚಿತರಾಗಿದ್ದು ಪರಸ್ಪರ ಒಡನಾಟದಿಂದ ಇದ್ದವರಾಗಿದ್ದು, ಕ್ಷುಲ್ಲಕ ಕಾರಣಕ್ಕಾಗಿ ಹಠಾತ್ತನೆ ಜಗಳ ಪ್ರಾರಂಭವಾಗಿದ್ದು ಪರಸ್ಪರ ಹೊಡೆದಾಟದಿಂದ ಈ ಘಟನೆ ಸಂಭವಿಸಿರುತ್ತದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿರುತ್ತದೆ.

ಟಿ.ನರಸೀಪುರ ಪಟ್ಟಣದಲ್ಲಿ ಹಾಲಿ ಶಾಂತ ಪರಿಸ್ಥಿತಿ ಇದ್ದು, ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳ ಗಸ್ತು ಮತ್ತು ಪಿಕೆಟಿಂಗ್ ಹಾಗೂ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮುಂದುವರೆಸಲಾಗಿದೆ.

---

HD 15 SDN 2023

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು